ಬ್ಯಾಡ್ಮಿಂಟನ್ ತಂಡ





# ಕಾಮನ್‌ವೆಲ್ತ್‌ನಲ್ಲಿ ಸ್ತ್ರೀಶಕ್ತಿ ವೈಭವ



■ ಗಿರೀಶ ದೊಡ್ಡಮನಿ

ಬರೋಬ್ಬರಿ ನಲ್ವತ್ತು ವರ್ಷಗಳ ಹಿಂದಿನ ಘಟನೆ ಇದು. ಕೆನಡಾದ ಎಡ್ಮಾಂಟನ್‌ನಲ್ಲಿ ಕಾಮನ್‌ವೆಲ್ತ್ ಕ್ರೀಡಾಕೂಟ ನಡೆದಿತ್ತು. ಆಗ ಭಾರತದ ಎಲ್ಲರ ಕಣ್ಣು ಬ್ಯಾಡ್ಮಿಂಟನ್ ಅಂಗಳದ ಮೇಲೆ ನೆಟ್ಟಿತ್ತು. ಅವತ್ತು ಕರ್ನಾಟಕದ ಪ್ರಕಾಶ್ ಪಡುಕೋಣೆ ಚಿನ್ನದ ಪದಕ ಗೆದ್ದಾಗ ಬ್ಯಾಡ್ಮಿಂಟನ್ ಪ್ರಿಯರು ಸಂಭ್ರಮಿಸಿದರು. ಆಗಲೇ ಅವರೆಲ್ಲರಿಗೂ ಮತ್ತೊಂದು ಸಂತಸದ ಸುದ್ದಿ ಲಭಿಸಿತ್ತು. ಮಹಿಳಾ ಬ್ಯಾಡ್ಮಿಂಟನ್ ಡಬಲ್ಸ್‌ನಲ್ಲಿ ಅಮಿ ಜಿಯಾ ಮತ್ತು ಕನ್ವಲ್ ಠಾಕೂರ್ ಕಂಚಿನ ಪದಕ ಜಯಿಸಿದ್ದರು. ನಮ್ಮ ದೇಶದ ಮಹಿಳೆಯರು ಕಾಮನ್‌ವೆಲ್ತ್ ಕೂಟದಲ್ಲಿ ಗೆದ್ದ ಮೊದಲ ಪದಕ ಅದಾಗಿತ್ತು. ಅಂದಿನ ಸಾಧನೆಯ ಪ್ರೇರಣೆ ಮತ್ತು ಫಲ ಈಚೆಗೆ ಆಸ್ಟ್ರೇಲಿಯಾದ ಗೋಲ್ಡ್‌ಕೋಸ್ಟ್‌ನಲ್ಲಿ ನಡೆದ 21ನೇ ಕಾಮನ್‌ವೆಲ್ತ್ ಕೂಟದಲ್ಲಿ ನೋಡಬಹುದು.

ಈ ಸಲ ಗೆದ್ದ ಒಟ್ಟು ಪದಕಗಳಲ್ಲಿ ಮಹಿಳೆಯರದ್ದೇ ಸಿಂಹಪಾಲು. ಚಿನ್ನದ ಪದಕಗಳಲ್ಲಿ ಶೇಕಡಾ 60 ರಷ್ಟು ಮಹಿಳಾ ಕ್ರೀಡಾಪಟುಗಳ ಕೊರಳನ್ನು ಅಲಂಕರಿಸಿವೆ. 16 ವರ್ಷದ ಮನುಭಾಕರ್ ಶೂಟಿಂಗ್‌ನಲ್ಲಿ ಚಿನ್ನ ಗೆದ್ದರೆ, ಮೂರು ಮಕ್ಕಳ ತಾಯಿ ಮೇರಿ ಕೋಮ್ ಅವರು ಬಾಕ್ಸಿಂಗ್‌ನಲ್ಲಿ ಸ್ವರ್ಣ ಸಾಧನೆ ಮಾಡಿದರು. ವೇಟ್‌ಲಿಫ್ಟಿಂಗ್‌ನಲ್ಲಿ ಮೀರಾಬಾಯಿ ಚಾನು, ಪೂನಂ ಯಾದವ್, ಕುಸ್ತಿಯಲ್ಲಿ ಬಬಿತಾ ಫೋಗಟ್, ಶೂಟಿಂಗ್‌ನಲ್ಲಿ ಹೀನಾ ಸಿಧು, ಮೆಹುಲಿ ಘೋಷ್, ತೇಜಸ್ವಿನಿ ಸಾವಂತ್, ಟೇಬಲ್ ಟೆನಿಸ್‌ನಲ್ಲಿ ಮಣಿಕಾ ಬಾತ್ರಾ ಹೀಗೆ ಪದಕ ವಿಜೇತ ಮಹಿಳೆಯರ ದೊಡ್ಡ ಪಟ್ಟಿಯೇ ಸಿಗುತ್ತದೆ.

ಅದರಲ್ಲೂ ಟೇಬಲ್ ಟೆನಿಸ್‌ನಲ್ಲಿ ಮಣಿಕಾ ಬಾತ್ರಾ ಮತ್ತು ಮೌಮಾ ದಾಸ್ ಅವರಿದ್ದ ಮಹಿಳಾ ತಂಡವು ಈ ಬಾರಿ ಇತಿಹಾಸವನ್ನೇ ಬರೆಯಿತು. ಇದೇ ಮೊದಲ ಬಾರಿಗೆ ಕೂಟದಲ್ಲಿ ಪದಕ ಗೆದ್ದ ದಾಖಲೆ ಬರೆಯಿತು. ಅಷ್ಟೇ ಅಲ್ಲ ಮಣಿಕಾ ಮತ್ತು ಮೌಮಾ ಜೋಡಿಯು ಡಬಲ್ಸ್‌ನಲ್ಲಿಯೂ ಪದಕ ಬಾಚಿಕೊಂಡಿತು. ಬ್ಯಾಡ್ಮಿಂಟನ್ ಮಿಶ್ರ ತಂಡ ವಿಭಾಗದಲ್ಲಿ ಭಾರತ ವಿಜಯ ಸಾಧಿಸಲು ಮಹಿಳಾ ಆಟಗಾರರದ್ದೇ ಪ್ರಮುಖ ಕಾಣಿಕೆ ಇತ್ತು. ಸೈನಾ ನೆಹ್ವಾಲ್, ಕನ್ನಡತಿ ಅಶ್ವಿನಿ ಪೊನ್ನಪ್ಪ, ಸಿಕ್ಕಿ ರೆಡ್ಡಿ, ಋತ್ವಿಕಾ ಗದ್ದೆ ಅವರ ಆಟ ರಂಗೇರಿತ್ತು. ಸಿಂಗಲ್ಸ್, ಡಬಲ್ಸ್‌ನಲ್ಲಿಯೂ ಮಹಿಳೆಯರು ಮಿಂಚಿದರು.

ಈ ಕೂಟದಲ್ಲಿ ಭಾರತಕ್ಕೆ ಮೊಟ್ಟಮೊದ ಚಿನ್ನದ ಪದಕ ದೊರಕಿಸಿಕೊಟ್ಟ ಕೀರ್ತಿ ಮಹಿಳಾ ಕ್ರೀಡಾಪಟುಗೆ ಸಲ್ಲಬೇಕು. ಮಣಿಪುರದ ವೇಟ್‌ಲಿಫ್ಟರ್ ಸಾಯಿಕೋಮ್ ಮೀರಾಬಾಯಿ ಚಾನು. 48 ಕೆ.ಜಿ. ವಿಭಾಗದಲ್ಲಿ ಮೂರು ದಾಖಲೆಗಳನ್ನು ನಿರ್ಮಿಸಿ ಪ್ರಥಮ ಚಿನ್ನ ಗೆದ್ದರು. ಮೀರಾಬಾಯಿ 2017ರಲ್ಲಿ ನಡೆದ ವಿಶ್ವ ಚಾಂಪಿಯನ್‌ಷಿಪ್‌ನ 48 ಕೆ.ಜಿ. ವಿಭಾಗದಲ್ಲಿ ಚಿನ್ನ, 2014 ರ ಕೂಟದಲ್ಲಿ ಕ್ರಮವಾಗಿ ಬೆಳ್ಳಿ ಮತ್ತು ಚಿನ್ನದ ಪದಕ ಜಯಿಸಿದ್ದಾರೆ. ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಎರಡು ಪದಕಗಳನ್ನೂ ಗೆದ್ದಿದ್ದಾರೆ. ಮಣಿಪುರದ ಇನ್ನೊಬ್ಬ ವೇಟ್‌ಲಿಫ್ಟರ್ ಸಂಜೀತಾ ಚಾನು ಕೂಡ ಚಿನ್ನದ ಪದಕ ಗಳಿಸಿದರು. ವಾರಣಾಸಿಯ ಪೂನಂ ಯಾದವ್ ಕೂಡ ವೇಟ್‌ಲಿಫ್ಟಿಂಗ್ ವಲಯದಲ್ಲಿ ಚಿನ್ನದ ಮಿಂಚು ಹರಿಸಿದರು. ಇಲ್ಲಿ ಒಂದು ಮುಖ್ಯ ವಿಷಯವೆಂದರೆ ಈ ಮೂವರೂ ಬಂದಿದ್ದು ಕೆಳ ಮಧ್ಯಮ ವರ್ಗದ ಮನೆತನಗಳಿಂದ. ಅದೂ ಕುಗ್ರಾಮಗಳಿಂದ. ಕ್ರೀಡಾ ಸೌಲಭ್ಯಗಳೇ ಇಲ್ಲದ ಊರುಗಳಿಂದ ಬಂದವರು.

ಶೂಟಿಂಗ್‌ನಲ್ಲಿಯೂ ಮಹಿಳಾಮಣಿಗಳದ್ದೇ ಪಾರಮ್ಯ. ಹರಿಯಾಣದ ಜಿಜಾರ್‌ನ 16ರ ಪೋರಿ ಮನು ಭಾಕರ್ ಈ ಬಾರಿಯ ಕಾಮನ್‌ವೆಲ್ತ್‌ನ 10